ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi - 591156
E-mail: rcubacademic2010@gmail.com
rcuregistrar@gmail.com
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565214/236

ಕ್ರಸಂ. : ರಾಚವಿ/ಬೆಳಗಾವಿ/ಕುಸಕಾ/ವಿದ್ಯಾಮಂಡಳ/2021–22/1309 ದಿನಾಂಕ : 25–07–2021

## ಸುತ್ತೋಲೆ

ವಿಷಯ : 2020–21ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಭೌತಿಕ (Offline) ತರಗತಿಗಳನ್ನು ನಡೆಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ : 25–07–2021

ಸೂಚಿತ ವಿಷಯದಂತೆ, ಪ್ರಸ್ತುತ ಅಧಿಕ ಮಳೆ ಮತ್ತು ಪ್ರವಾಹಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು, ಪೋಷಕರು ಹಾಗೂ ವಿದ್ಯಾರ್ಥಿಗಳ ಒತ್ತಾಯದ ಮೇರೆಗೆ, ಈಗಾಗಲೇ ದಿನಾಂಕ:26–07–2021 ರಿಂದ ನಿಗದಿಯಾಗಿದ್ದ ಸ್ನಾತಕ ಹಾಗೂ ದಿನಾಂಕ: 27–07–2021 ರಿಂದ ನಿಗದಿಯಾಗಿದ್ದ ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡಲಾಗಿದ್ದು, ಎಲ್ಲಾ ಪರೀಕ್ಷೆಗಳನ್ನು ದಿನಾಂಕ: 02–08–2021 ರಿಂದ ಮರುನಿಗದಿಪಡಿಸಲಾಗಿದೆ. ಪರೀಕ್ಷೆಗಳ ವೇಳಾಪಟ್ಟಿಯನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು.

ಕರ್ನಾಟಕ ಸರ್ಕಾರದ ಆದೇಶದಂತೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2020–21ನೇ ಸಾಲಿನ ಶೈಕ್ಷಣಿಕ ಸ್ನಾತಕ ಪದವಿ ಕೋರ್ಸ್‌ನ 2, 4 ಮತ್ತು 6ನೇ ಸೆಮಿಸ್ಟರ್‌ಗಳನ್ನು ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ನ 2 ಮತ್ತು 4ನೇ ಸೆಮಿಸ್ಟರ್‌ನ ತರಗತಿಗಳನ್ನು ದಿನಾಂಕ:26–07–2021 ರಿಂದ ಭೌತಿಕ (Offline) ತರಗತಿಗಳನ್ನು ಕೋವಿಡ್–19 ಮಾರ್ಗಸೂಚಿಗಳನ್ವಯ ನಡೆಸುವಂತೆ ತಿಳಿಸಲಾಗಿದೆ. ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಕೋವಿಡ್–19 ರ ಕನಿಷ್ಠ ಮೊದಲನೇ ಲಸಿಕೆಯನ್ನಾದರೂ ಕಡ್ಡಾಯವಾಗಿ ಪಡೆದಿರಬೇಕು. ಪಡೆಯದಿದ್ದಲ್ಲಿ ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು ಲಸಿಕಾ ಅಭಿಯಾನ ನಡೆಸಿ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಮುಂದುವರೆದು, ಕರ್ನಾಟಕ ಸರ್ಕಾರದ ಆದೇಶದನ್ವಯ ಈ ಮೂಲಕ ವಿಶ್ವವಿದ್ಯಾಲಯದ ಎಲ್ಲ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು/ಸಂಯೋಜಕರು, ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು/ಸಂಯೋಜಕರು ಹಾಗೂ ಎಲ್ಲ ಮಹಾವಿದ್ಯಾಲಯದ ಪ್ರಾಚಾರ್ಯರುಗಳಿಗೆ ತಿಳಿಸುವುದೇನೆಂದರೆ ಕೋವಿಡ್–19ರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಿ ತರಗತಿಗಳನ್ನು ಪ್ರಾರಂಭಿಸಲು ಹಾಗೂ ಯಾವುದೇ ಮಹಾವಿದ್ಯಾಲಯದಲ್ಲಿ ಸರ್ಕಾರದ ಕೋವಿಡ್–19ರ ನಿಯಮಗಳ ಉಲ್ಲಂಘನೆಯಾದರೆ ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ ಆಡಳಿತ ಮಂಡಳಿಯವರೇ ಜವಾಬ್ದಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು

ಇವರಿಗೆ,

1. ಮುಖ್ಯಸ್ಥರುಗಳು/ಸಂಯೋಜಕರು, ಸ್ನಾತಕೋತ್ತರ ಎಲ್ಲ ಅಧ್ಯಯನ ವಿಭಾಗಗಳು, ರಾ.ಚ.ವಿ., ಬೆಳಗಾವಿ
2. ನಿರ್ದೇಶಕರು/ಸಂಯೋಜಕರು ಸ್ನಾತಕೋತ್ತರ ಕೇಂದ್ರಗಳು ವಿಜಯಪುರ, ಬಾಗಲಕೋಟ ಮತ್ತು ಜಮಖಂಡಿ
3. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
4. ಪ್ರಾಚಾರ್ಯರು, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿನ ಸಂಯೋಜಿತ ಸ್ನಾತಕ/ಸ್ನಾತಕೋತ್ತರ ಮಹಾವಿದ್ಯಾಲಯಗಳು

Scanned by CamScanner